







ಮಿಂಚಿನಂತೆ ಮರೆಯಾಗುತ್ತಿದ್ದವು. ಬಾನಲ್ಲಿ ಬಳುಕು ನರ್ತನದ ಜೊತೆ ಚುಮ್ ಚುಮ್ ಕೇಕೆಯ ಸದ್ದಿನ ಕೂಗಿನೊಂದಿಗೆ ಪುನಃ ನೆಲದಲ್ಲಿ ಬಂದು ಕುಳಿತುಕೊಳ್ಳುತ್ತಿದ್ದವು.

ಗುಬ್ಬಚ್ಚಿಗಿಂತ ತುಸು ದೊಡ್ಡ ಗಾತ್ರದ ಈ ಹಕ್ಕಿಯ ಮೈ ಬಣ್ಣವು ಬೂದು. ಎದೆ, ಹೊಟ್ಟೆ ತಳಭಾಗ ಬಿಳಿ. ಸಣ್ಣದಾದ ಕರಿ ಕೊಕ್ಕು, ಕೊಕ್ಕಿನ ಹಿಂಬಾಗದಲ್ಲಿ ಕೆಂಪನೆಯ ಚುಕ್ಕೆ. ಕಪ್ಪನೆಯ ಕಣ್ಣಿನ ಸುತ್ತಲೂ ಬಿಳಿಯ ಉಂಗುರ. ನೀಳ ಕಾಲ್ಬೆರಳುಗಳುಳ್ಳ ಕರಿ ಬಣ್ಣದ ಕಾಲು. ಬಾಲವು ಎರಡು ಕವಲುಗಳಿಂದ ಕೂಡಿದ್ದು ಇದರಿಂದಲೇ ಈ ಪಕ್ಷಿಗೆ ಕವಲು ಬಾಲದ ಚಿಟವ ಎಂಬ ಹೆಸರು ಬಂದಿದೆ.

ಗಂಡು ಮತ್ತು ಹೆಣ್ಣು ಪಕ್ಷಿಗಳು ನೋಡಲು ಒಂದೇ ತೆರನಾಗಿದ್ದು ಯಾವುದೇ ವ್ಯತ್ಯಾಸ ಹೊಂದಿರುವುದಿಲ್ಲ. ಈ ಹಕ್ಕಿಗಳ ಇನ್ನೊಂದು ಆಕರ್ಷಕ ನಡವಳಿಕೆ ಎಂದರೆ, ಅಣತಿ ದೂರ ಹಾರಿ ನಂತರ ನೆಲಕ್ಕಿಳಿದು ಓಡುವುದು! ಸಂತಾನಾಶ್ರಯ ಕಾಲದಲ್ಲಿ ಪಕ್ಷಿಗಳು ಅಧಿಕ ಗದ್ದಲ ಮಾಡುತ್ತವೆ. ಆಗ ಗಂಡು ಹಕ್ಕಿ ಹಾಸ್ಯಾಸ್ಪದ ರೀತಿಯ ಪ್ರಣಯಾಚರಣೆ ಮಾಡುತ್ತಾ ಕೊಕ್ಕಿನಲ್ಲಿ ಜಲಸಸ್ಯ ಗಳನ್ನು ಹಿಡಿದು ಹೆಣ್ಣು ಪಕ್ಷಿಯ ಎದುರು ನಿಂತು ಗಡುಸಾಗಿ ಕೂಗಿ ಕರೆದು, ಮಿಲನಕ್ಕೆ ಆಹ್ವಾನಿಸುತ್ತದೆ.

ಕನ್ನಡದಲ್ಲಿ ಕವಲು ಬಾಲದ ಚಿಟವ ಎನ್ನುವ ಇವನ್ನು ಆಂಗ್ಲ ಭಾಷೆಯಲ್ಲಿ ಸ್ಮಾಲ್ ಪ್ರಾಟಿನ್ ಕೋಲ್ **(Small Pratin cole)** ಎಂದು ಕರೆಯುತ್ತಾರೆ. **Glareola lactea** ಎಂದು ಪಕ್ಷಿಶಾಸ್ತ್ರೀಯವಾಗಿ ಹೆಸರಿಸಿದ್ದು, **Charadriiformes** ಗಣದ **Glareolidae** ಕುಟುಂಬಕ್ಕೆ ಇವುಗಳನ್ನು ಸೇರಿಸಲಾಗಿದೆ.

ಸುಮಾರು ಹೊತ್ತು ಕಾಯ್ದು ನೆಲದ ಮೇಲೆ ಹೊಟ್ಟೆ ಹಚ್ಚಿ ಮಲಗಿ ಮೊಣಕೈಯೂರಿ ಕೈಯಲ್ಲಿ ಕ್ಯಾಮರಾ ಹಿಡಿದು ಲೆನ್ಸ್ ಅನ್ನು ಅವುಗಳತ್ತ ಗುರಿ ಮಾಡಿ ಫೋಟೋಗ್ರಫಿ ಮಾಡ ತೊಡಗಿದೆ. ಆಗಲೇ ಗಂಟೆ 10 ಹೊಡೆದು ಬೇಸಿಗೆಯ ರಣಬಿಸಿಲು ತಡೆಯಲಾರದ ಸೆಖೆಯಿಂದಾಗಿ ದೇಹವೆಲ್ಲ ಬೆವರಿತ್ತು. ಹೊಟ್ಟೆ ಬೇರೆ ಚುರುಗುಡುತ್ತಿತ್ತು. ಆಚೆ ದಡದಲ್ಲಿದ್ದ ದೋಣಿಯನ್ನು ಬರಲು ನಾವಿಕನಿಗೆ ಸನ್ನೆ ಮಾಡಿದೆ. ಅವನು ಬರುವುದರೊಳಗೆ ಆ ದ್ವೀಪದಲ್ಲಿರುವ ಮೊಟ್ಟೆಗಳಿರುವ ಸ್ಥಳಗಳನ್ನು ಎಣಿಸುತ್ತಾ ಹೋದೆ. ಸುಮಾರು 58 ಗೂಡುಗಳಿರುವ ಲೆಕ್ಕ ಸಿಕ್ಕಿತು. ಪ್ರತಿಯೊಂದು ಸ್ಥಳದಲ್ಲಿ 2 ಅಥವಾ 3 ಮೊಟ್ಟೆಗಳಿದ್ದವು. ಒಟ್ಟು 113 ಹಕ್ಕಿಗಳಿರುವ ಬಗ್ಗೆ ದಾಖಲಿಸಿಕೊಳ್ಳುತ್ತಿದ್ದ ಹಾಗೇ ದೋಣಿ ಬಂತು. ಅರಣ್ಯಾಧಿಕಾರಿಯವರ ಆಫೀಸಿಗೆ ಬಂದು ಅವರೊಂದಿಗೆ ತಿಂಡಿ ಸವಿದು ಮರಳಿದೆ.

ಐದು ದಿನ ಬಿಟ್ಟು ಮತ್ತೆ ಆ ಅತ್ತಿವೇರಿಯ ದ್ವೀಪಕ್ಕೆ ಭೇಟಿ ಕೊಟ್ಟೆ. ಕೆಲವು ಪಕ್ಷಿಗಳು ಅವುಗಳ ಮೊಟ್ಟೆಗಳಿಗೆ ಕಾವು ಕೊಡುತ್ತಿದರೆ ಮತ್ತೆ ಕೆಲವು ಸಣ್ಣ ಮರಿಗಳಿಗೆ ಆಹಾರ ನೀಡುವಲ್ಲಿ ತಲ್ಲೀನವಾಗಿದ್ದವು. ಇನ್ನೂ ಕೆಲವು ನೀರಿನ ಸನಿಹ ಹೋಗಿ ಬೇಸಿಗೆಯ ದಾಹ ತೀರಿಸಿಕೊಳ್ಳಲು ನೀರು ಕುಡಿಯುತ್ತಿದ್ದವು. ಕೆಲವು ಮರಿಗಳು ಆಗಲೇ ಗೂಡನ್ನು ತೊರೆದು ತಾಯಿ ಪಕ್ಷಿಯೊಂದಿಗೆ ನಡೆದಾಡುತ್ತಿದ್ದವು. ಎಲ್ಲವೂ ಬಹಳ ಚಟುವಟಿಕೆಯಿಂದ ಇದ್ದವು.

## ಹೋಗುವುದು ಹೇಗೆ?

ಬೆಂಗಳೂರಿನಿಂದ: ರಾಷ್ಟ್ರೀಯ ಹೆದ್ದಾರಿ 4 ರಲ್ಲಿ ಬಂದು ತಡಸ ಕ್ರಾಸ್ ನಿಂದ ತಿರುವು ಪಡೆದು 25 ಕಿ.ಮಿ ಸಾಗಿದರೆ ಅತ್ತಿವೇರಿ ಪಕ್ಷಿಧಾಮವನ್ನು ಸೇರಬಹುದು

ಹುಬ್ಬಳ್ಳಿಯಿಂದ: ರಾಷ್ಟ್ರೀಯ ಹೆದ್ದಾರಿ 4 ರಲ್ಲಿ ಸಾಗಿ ತಡಸ ಕ್ರಾಸ್ ಮುಖಾಂತರ ಸಾಗಿ 45 ಕಿ.ಮೀ ಕ್ರಮಿಸಿದರೆ ಅತ್ತಿವೇರಿ ಪಕ್ಷಿಧಾಮವನ್ನು ಸೇರಬಹುದು.ಎಂಡಗೋಡದಿಂದ: ತಾಲೂಕ ಕೇಂದ್ರ ಮುಂಡಗೋಡದಿಂದ ಈ ಪಕ್ಷಿಧಾಮ 15 ಕಿ.ಮೀ ದೂರದಲ್ಲಿದೆ.